ಶ್ರೀ ಆರ್. ಎಲ್. ಜಾಲಪ್ಪ.—ಸಹಕಾರ ಸಂಘದವರು ಜಪ್ತಿಗೆ ಹೋಗಿದ್ದರು. ಅಲ್ಲಿ 20-30 ಸಾವಿರ ರೂ. ಬೆಲೆ ಬಾಳುವ ಈರುಳ್ಳಿ ಇದ್ದರೂ ಜಪ್ತಿ ಮಾಡಿಲ್ಲ. ಅದಕ್ಕಾಗಿ ಮಾನ್ಯ ಸದಸ್ಯರು ಸರ್ಕಾರವನ್ನು ಅಭಿನಂದಿಸಬೇಕು. ಈ ವರ್ಷ 19 ಜಿಲ್ಲೆಗಳ ಪೈಕಿ 17 ಜಿಲ್ಲೆಗಳಿಗೆ ಜಿಲ್ಲಾ ಬ್ಯಾಂಕಿನವರು ಸಾಲ ಕೊಡುವಂತಹ ಎಲಿಜಿಬಲಿಟಿ ಬಂದಿದೆ. ಸಾಲ ವಸೂಲು ಮಾಡುವುದನ್ನು ನಿಲ್ಲಿಸುವಂತೆ ಅಧಿಕಾರಿಗಳಿಗೆ ತಿಳಿವಳಿಕೆ ಕೊಟ್ಟಿದ್ದೇವೆ. ಸಾಲ ವಸೂಲು ಮಾಡದೇ ಇದ್ದರೆ, ಪುನಃ ಸಾಲ ಕೊಡುವುದಾದರೂ ಹೇಗೆ ? ಇದರಿಂದ ಬಹಳ ತೊಂದರೆಯಾಗಿದೆ.

ವಿಷಯ.—ಸವದತ್ತಿಯಲ್ಲಿರುವ ಶ್ರೀ ಎಲ್ಲಮ್ಮ ದೇವಸ್ಥಾನದಿಂದ ಬರುವ ಆದಾಯ

ಪ್ರ. ಸಂಖ್ಯೆ 85 (260) ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಅಥಣಿ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶ್ರೀ ಕಂದಾಯ ಹಾಗೂ ಯೋಜನಾ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ ?

ಅ) ಸವದತ್ತಿ ಎಲ್ಲಮ್ಮ ದೇವಸ್ಥಾನದ ಆಡಳಿತ ಯಾರ ವಶದಲ್ಲಿದೆ, ಹಾಗೂ ಸದರೀ ದೇವಸ್ಥಾನದಿಂದ ಕಳೆದ ನಾಲ್ಕು ವರ್ಷಗಳಲ್ಲಿ ಸಂದಾಯವಾದ ವರಮಾನವೆಷ್ಟು :

ಆ) ಸವದತ್ತಿ ಪುರಸಭೆ ಹಾಗೂ ದೇವಸ್ಥಾನದ ಧರ್ಮದರ್ಶಿಗಳ ನಡುವೆ ಹೊಂದಾಣಿಕೆ ಇಲ್ಲದಿದ್ದು ಇದರಿಂದ ಭಕ್ತಾದಿಗಳಿಗೆ ತೊಂದರೆ ಆಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ;

ಇ) ಹಾಗಿದ್ದಲ್ಲಿ ಅವರಿಬ್ಬರ ನಡುವೆ ಇರುವ ವೈಮನಸ್ಸನ್ನು ತೊಡೆದು ಹಾಕಿ ದೇವರ ದರ್ಶನಕ್ಕೆ ಬರುವ ಭಕ್ತಾದಿಗಳಿಗೆ ಅನುಕೂಲ ಮಾಡಿಕೊಡುವ ಬಗ್ಗೆ ಸರ್ಕಾರದವರು ಕೈಕೊಂಡ ಕ್ರಮವೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಯೋಜನಾ ಮಂತ್ರಿಗಳು).—

ಅ) ಇದು ಮುಜರಾಯಿ ಸಂಸ್ಥೆಯಾಗಿದ್ದು ಸರ್ಕಾರದ ವಶದಲ್ಲಿದೆ. ಸದರೀ ದೇವಾಸ್ಥಾನಕ್ಕೆ ಕಳೆದ ನಾಲ್ಕು ವರ್ಷಗಳಲ್ಲಿ ಸುದಾಯವಾದ ವರಮಾನವು ಈ ಕೆಳ ಕಂಡಂತಿದೆ ;

1981-82	9,85,866-45
1982-83	10.31,349-97
1983-84	11,84 728-65
1984-85	15,18,412-92
ಒಟ್ಟು	47,20,357-99

ಆ) ಸವದತ್ತಿ ಪುರಸಭೆ ಹಾಗೂ ದೇವಾಸ್ಥಾನ ಧರ್ಮದರ್ಶಿಗಳ ನಡುವೆ ಹೊಂದಾಣಿಕೆ ಇದ್ದು ಈ ಕ್ಷೇತ್ರಕ್ಕೆ ಬರುವ ಭಕ್ತಾದಿಗಳಿಗೆ ತೊಂದರೆಯಾಗದಂತೆ ಕ್ರಮ ಕೈಗೊಳ್ಳಲಾಗಿದೆ.

ಇ) ಮೇಲೆ ಹೇಳಿದ ಉತ್ತರದ ಪ್ರಯುಕ್ತ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೆ, ಸವದತ್ತಿ ನಗರಸಭೆ ಮತ್ತು ದೇವಸ್ಥಾನದ ಆಡಳಿತ ಮಂಡಳಿಗೂ ವಿವಾದ ಇತ್ತು. ಈ ಬಗ್ಗೆ ಕಂದಾಯ ಕಾರ್ಯದರ್ಶಿಯವರು ದಿನಾಂಕ 8-1-85 ರಂದು ಜಂಟಿ ಸಭೆ ಕರೆದು, ನಗರಸಭೆ, ಮತ್ತು ದೇವಸ್ಥಾನದ ಟ್ರಸ್ಟ್ ಯಾವ ರೀತಿ ಕೆಲಸ ಮಾಡಬೇಕೆಂದು ಒಂದು ಸರ್ಕಾರಿ ಆಜ್ಞೆಯನ್ನು ಹೊರಡಿಸಿದ್ದಾರೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಸವದತ್ತಿ ಎಲ್ಲಮ್ಮ ದೇವಸ್ಥಾನ ಕರ್ನಾಟಕಕ್ಕೆ ದೊಡ್ಡ ಕ್ಷೇತ್ರವಾಗಿದೆ. ಅಲ್ಲಿ ತಿರುಪತಿ ಮಾದರಿಯ ರೀತಿ ಅಧಿಕಾರೇತರರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಬೇಕೆಂದು ತಮ್ಮ ಮುಖಾಂತರ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಜೊತೆಗೆ ಅಲ್ಲಿ ಎಷ್ಟು ಹಣ ಜಮಾ ಆಗಿದೆ. ಅದನ್ನು ವಿದ್ಯಾ ಸಂಸ್ಥೆಗಳಿಗೆ ಖರ್ಚು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಬಹಳ ವರ್ಷಗಳ ಹಿಂದೆ ಈ ದೇವಸ್ಥಾನದ ಬಗ್ಗೆ ಒಂದು ಕಾನೂನಾಗಿದೆ. ಆದರೆ, ಕೆಲವರು, ಹೈಕೋರ್ಟ್, ಸುಪ್ರೀಂ ಕೋರ್ಟಿಗೆ ಹೋಗಿ ಸ್ಟೇ ತಂದಿದ್ದಾರೆ. ಪೂಜಾರಿಗಳು ಮತ್ತು ಇತರ ವ್ಯಕ್ತಿಗಳು ನಡುವೆ ವಿವಾದ ಇದೆ. ಮಾನ್ಯ ಸದಸ್ಯರು ಹೇಳಿದಂತೆ ತಿರುಪತಿ ಕ್ಷೇತ್ರದ ಮಾದರಿಯಂತೆ ಈ ಕ್ಷೇತ್ರವನ್ನು ಅಭಿವೃದ್ಧಿಗೊಳಿಸಬೇಕೆಂಬ ಇಚ್ಛೆ ಸರ್ಕಾರಕ್ಕೆ ಇದೆ. ಇಲ್ಲಿಗೆ ಕರ್ನಾಟಕ ಮತ್ತು ಮಹಾರಾಷ್ಟ್ರದಿಂದ ಅನೇಕ ಜನ ಭಕ್ತರು ಬರುತ್ತಿದ್ದಾರೆ. ಇಲ್ಲಿನ ಆದಾಯ ಕೂಡ ಚೆನ್ನಾಗಿದೆ. ಆದರಲ್ಲಿ ಬಂದ ಹಣದಲ್ಲಿ 3ಲಕ್ಷ 80 ಸಾವಿರ ರೂ ಖರ್ಚು ಮಾಡಿ ಕುಡಿಯುವ ನೀರಿನ ವ್ಯವಸ್ಥೆ ಮಾಡುತ್ತಿದ್ದೇವೆ. 9 ಲಕ್ಷ ಹಣವನ್ನು ಖರ್ಚು ಮಾಡಿ ಯಾತ್ರಿಕರು ತಂಗುವುದಕ್ಕೆ ಮಳಿಗೆಗಳನ್ನು ಕಟ್ಟಿಸತಕ್ಕಂತಹ ಯೋಜನೆ ಇದೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ದೇವಸ್ಥಾನಗಳಲ್ಲಿ ದೇವದಾಸಿ ಎಂಬ ಅನಿಷ್ಠ ಪದ್ಧತಿಯನ್ನು ತೆಗೆದುಹಾಕುವುದಕ್ಕೆ ಸರ್ಕಾರ ಏನು ಕ್ರಮ ಕೈಗೊಂಡಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ಪದ್ಧತಿಯನ್ನು ನಿಲ್ಲಿಸುವುದಕ್ಕೆ ಸರ್ಕಾರ ಸೂಕ್ತ ಕ್ರಮವನ್ನು ತೆಗೆದುಕೊಂಡಿದೆ.

ವಿಷಯ :—ಮದ್ಯಸಾರದ ಪರವಾನೆಗಳ ನೀಡಿಕೆ.

ಪ್ರ. ಸಂಖ್ಯೆ 86 (296) ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ) ಮಾನ್ಯ ಅಬಕಾರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

(ಅ) 1988ರಿಂದ ಇಂದಿನವರೆಗೆ ಕೆಲವು ಖಾಸಗಿಯವರಿಗೆ ಉತ್ತೇಜನ ಪರವಾನಗಿಗಳನ್ನು ನೀಡಲಾಗಿದೆಯೆ ? ಹಾಗಿದ್ದಲ್ಲಿ ಯಾವ ಉದ್ದೇಶಗಳಿಗಾಗಿ ಪರವಾನಗಿಗಳನ್ನು ನೀಡಲಾಗಿದೆ. ಮತ್ತು ಪರವಾನಗಿಗಳನ್ನು ಯಾರಿಗಾಗಿ ಕೊಡಲಾಗಿದೆಯೇ ಅವರ ಹೆಸರುಗಳನ್ನು ತಿಳಿಸುವುದು;

(ಆ) ಅಂತಹ ಉತ್ತೇಜಕದ ಪರವಾನಗಿಗಳನ್ನು ದುರುಪಯೋಗಪಡಿಸಿಕೊಂಡು ಲಾಭ ಮಾಡುತ್ತಿರುವ ವಿಷಯ ಸರ್ಕಾರಕ್ಕೆ ತಿಳಿದಿದೆಯೆ ;

(ಇ) ಹಾಗಿದ್ದಲ್ಲಿ, ಅಂತಹವರುಗಳ ಮೇಲೆ ಏನು ಕ್ರಮ ತೆಗೆದುಕೊಳ್ಳಲಾಗಿದೆ ?

ಶ್ರೀ ರಮೇಶ ಜಿಗಜಿಣಗಿ (ಅಬ್ಕಾರಿ ರಾಜ್ಯ ಮಂತ್ರಿಗಳು).—

(ಅ) ಹೌದು, 1983ರಿಂದ ಇಲ್ಲಿಯವರೆಗೆ ಖಾಸಗಿಯವರಿಗೆ ಉತ್ತೇಜಕ ಪರವಾನಗಿಗಳನ್ನು ನೀಡಿರುವುದರ ಉದ್ದೇಶ ಮತ್ತು ಅವರ ಹೆಸರುಗಳನ್ನು ಅನುಬಂಧ 'ಅ' ನಲ್ಲಿ ಕೊಡಲಾಗಿದೆ.

(ಆ) ಇಲ್ಲ.

(ಇ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ANNEXURE A to L.A. No. 296(E)

LIST SHOWING THE SPIRIT LICENCES SANCTIONED TO VARIOUS PERSONS/COMPANIES FOR MANUFACTURE OF CHEMICALS FOR JULY 83 TO DATE JUNE 84.

Sl. No.	Name of Licensee	Purpose for which sanctioned	Remarks
1	2	3	4
1.	M/s. Phosphate Plasticiners (P) Ltd. Bangalore.	Tri Ethyl Phosphate	
2.	M/s. Venus Chemical Ind., Hubli.	Ethyl Acetate	
3.	M/s. Kaveri Chemical Ind., Bangalore.	Ethyl accetate and Acedit Acid	(Closed since July 84)
4.	M/s. Aruna Chemicals, Bangalore.	Ethyl Accetate	
5.	M/s. Basichem Industries, Bidar.	Ethyl Acetate	
6.	M/s. Deccan Organic Chemical Humnabad, Bidar.	Ether Solvent Ethyl Chloride and Chloroform	